ಇ) ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಯ ಆದೇಶದನ್ವಯ ಮೇಲಿನ ವರ್ಗಾವಣೆಯನ್ನು ಮಾಡಿದೆ.

ಭಾರತೀ ನಗರದಲ್ಲಿ ಕ್ರೀಡಾಂಗಣ ಅಭಿವೃದ್ಧಿ ಕುರಿತು

884 - ಶ್ರೀ ಎಸ್. ರಾಜಣ್ಣ (ಭಾರತಿನಗರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಕ್ರೀಡಾಂಗಣಗಳು ಇವೆ?

ಆ) ಈ ಕ್ಷೇತ್ರದಲ್ಲಿ ಇರುವ ಕ್ರೀಡಾಂಗಣಗಳ ಅಭಿವೃದ್ಧಿಗೆ 94-95ನೇ ಸಾಲಿನಲ್ಲಿ ಭರಿಸಿದ ವೆಚ್ಚವೆಷ್ಟು?

ಇ) 1996ರ ರಾಷ್ಟ್ರೀಯ ಕ್ರೀಡೆಗಳ ಸಂಬಂಧ ಈ ಕ್ಷೇತ್ರದಲ್ಲಿ ಹೊಸ ಕ್ರೀಡಾಂಗಣಗಳ ನಿರ್ಮಾಣ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿದೆಯೇ?

ಈ) ಹಾಗಿದ್ದಲ್ಲಿ ವಿವರಗಳು?

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಭಾರತಿನಗರ ವಿಧಾನಸಭಾ ಕ್ಷೇತ್ರದಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ಕ್ರೀಡಾಂಗಣವೂ ಇರುವುದಿಲ್ಲ.

ಆ) 1994-95ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮಕ್ಕಾಗಿ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ದಾವಣಗೆರೆ ಪಟ್ಟಣದ ಆಸ್ಪತ್ರೆಗಳ ಕುರಿತು ಹಾಗೂ ಖರ್ಚುಮಾಡಿರುವ ಹಣದ ಬಗ್ಗೆ

929 - ಶ್ರೀ ಶ್ಯಾಮನೂರು ಶಿವಶಂಕರಪ್ಪ (ದಾವಣಗೆರೆ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಸಿಟಿಯಲ್ಲಿ ಸರ್ಕಾರಿ ಸಿಟಿ ಆಸ್ಪತ್ರೆ ಮತ್ತು ಹಳೆಯ ಸರ್ಕಾರಿ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಸರ್ಕಾರವು ಖರ್ಚು ಮಾಡಿರುವ ಮೊತ್ತವೆಷ್ಟು?

ಆ) ಹಳೆಯ ಪಟ್ಟಣದ ಪ್ರದೇಶದಲ್ಲಿ ಮತ್ತೊಂದು ಆಸ್ಪತ್ರೆಯನ್ನು ಸರ್ಕಾರವು ಕಟ್ಟುತ್ತದೆಯೆ?

ಇ) ಸಿಟಿಯ ಹಳೆಯ ಆಸ್ಪತ್ರೆಯ ಸುತ್ತ ಇರುವ ಎಲ್ಲಾ ಅನಧಿಕೃತ ಕಟ್ಟಡವನ್ನು ಕೆಡವಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ದಾವಣಗೆರೆಯಲ್ಲಿರುವ ಸರ್ಕಾರಿ ಸಿ.ಬಿ. ಆಸ್ಪತ್ರೆ ಮತ್ತು ಹಳೆಯ ಸರ್ಕಾರಿ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗಳಿಗೆ ಸರ್ಕಾರವು ಖರ್ಚು ಮಾಡಿರುವುದು 1994-95ನೇ ಸಾಲಿನಲ್ಲಿ ಈ ಕೆಳಕಂಡಂತಿರುತ್ತದೆ.

ಸಿಟಿ ಆಸ್ಪತ್ರೆ ದಾವಣಗೆರೆ	ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ

		(ರೂ.ಲಕ್ಷಗಳಲ್ಲಿ)	
ಯೋಜನೇತರ:			
1.	ವೇತನ ಅಧಿಕಾರಿಗಳು ಮತ್ತು ಸಿಬ್ಬಂದಿ	2,65,510	41.470
2.	ಪ್ರಯಾಣ ವೆಚ್ಚ	00.600	0.300
3.	ಕಛೇರಿ ವೆಚ್ಚ(ವಿದ್ಯುತ್ ಮತ್ತು ನೀರಿನ ಸರಬರಾಜು ಇತ್ಯಾದಿ ಸೇರಿದಂತೆ)	35.450	4.950
4.	ಔಷಧ ಮತ್ತು ರಸಾಯನಿಕಗಳು		
	ಅ) ಸರ್ಕಾರಿ ಔಷಧ ಮಳಿಗೆ	44.000	4.510
	ಆ) ನೇರವಾಗಿ	28.840	3.500
5.	ಸ್ಯಾಹಾರ ವೆಚ್ಚ	24.970	2.590
6.	ಸಾಧನ ಮತ್ತು ಸಲಕರಣೆಗಳು	5,526	0.175
1994-95ರ ಅನುದಾನದ ಮೊತ್ತ ಒಟ್ಟು ಹೆಚ್ಚುವರಿ ಅನುದಾನವು ಹಳೆಯ ಬಿಲ್ಲುಗಳನ್ನು ಪಾವತಿಗಾಗಿ		404.946	57.495
1) ಸಾಧನ ಸಲಕರಣೆಗಳು		10.460	-
2) ಪಥ್ಯಾಹಾರ ವೆಚ್ಚ		12.00	-
3) ಔಷಧ ಮತ್ತು ರಾಸಾಯನಿಕಗಳು		7.65	-
	ಒಟ್ಟು	435.059	57.495
	ರೂ.	492.555.	

ಅ) ಪ್ರಸ್ತುತ ಯಾವ ಪ್ರಸ್ತಾವನೆಯು ಈ ಬಗ್ಗೆ ಪರಿಶೀಲನೆಯಲ್ಲಿಲ್ಲ.

ಇ) ಅಧೀಕ್ಷಕರು, ಸಿ.ಜಿ. ಆಸ್ಪತ್ರೆ ದಾವಣಗೆರೆ. ಇವರು ಸುತ್ತಮುತ್ತ ಇರುವ ಅನಧಿಕೃತ ಶೆಡ್‌ಗಳನ್ನು ತೆಗೆಯಲು ಸ್ಥಳೀಯ ಮುನಿಸಿಪಲ್ ಅಧಿಕಾರಿಗಳಿಗೂ ಮತ್ತು ಜಿಲ್ಲಾಧಿಕಾರಿಗಳಿಗೂ ಚಿತ್ರದುರ್ಗ ಇವರೊಂದಿಗೆ ಪತ್ರ ವ್ಯವಹಾರವು ನಡೆಸಲಾಗಿದೆ. ಅವರಿಂದ ವರದಿ ಬಂದ ನಂತರ ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವುದು.

ಬಿನ್ನಿಪೇಟೆ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡದ ಬಗ್ಗೆ

1012 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿನ್ನಿಪೇಟೆ ಕ್ಷೇತ್ರದಲ್ಲಿ ಸರ್ಕಾರಿ ಪದವಿ ಕಾಲೇಜು ಯಾವಾಗ ಪ್ರಾರಂಭವಾಯಿತು?

ಆ) ಈ ಕಾಲೇಜನ್ನು ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತಿದೆಯೇ?

ಇ) ಇದಕ್ಕೆ ಕೊಡತಕ್ಕ ಬಾಡಿಗೆ ಎಷ್ಟು?

ಈ) ಸರ್ಕಾರಿ ಈ ಕಾಲೇಜಿಗೆ ಸ್ವಂತ ಕಟ್ಟಡ ಕಟ್ಟಲು ಕಾರ್ಯಕ್ರಮ ಹಮ್ಮಿಕೊಂಡಿದೆಯೇ? :

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) 1985-86ನೇ ಸಾಲಿನಲ್ಲಿ

ಆ) ಹೌದು

ಇ) ಮಾಹೆಯಾನ 15,650 ರೂ.ಗಳು

ಈ) ಹೌದು